**<u>ಕರ್ನಾಟಕ ಲೋಕಾಯುಕ್ತ</u>**

**ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/3126/2022**
**ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು,
ದಿನಾಂಕ: 16/06/2023.

**<u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ</u>**

ವಿಷಯ: ಸರ್ಕಾರಿ ನೌಕರರಾದ **ಶ್ರೀ ಎಸ್. ಸಾಗರ ಬಿನ್ ಲೇಟ್ ಶೇಖರಪ್ಪ, ಬಿಲ್ ಕಲೆಕ್ಟರ್, ಗಂಗನಕೋಟೆ ಗ್ರಾಮ ಪಂಚಾಯತ್, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

– 0 –

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ದಾವಣಗೆರೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ, **ಶ್ರೀ ಎಸ್. ಸಾಗರ ಬಿನ್ ಲೇಟ್ ಶೇಖರಪ್ಪ, ಬಿಲ್ ಕಲೆಕ್ಟರ್, ಗಂಗನಕೋಟೆ ಗ್ರಾಮ ಪಂಚಾಯತ್, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಇವರು **ಶ್ರೀ ಸಚಿನ್ ಬಿನ್ ಷಣ್ಮುಖಪ್ಪ, ದಾನಿಹಳ್ಳಿ ಗ್ರಾಮ, ನ್ಯಾಮತಿ ತಾಲ್ಲೂಕು ದಾವಣಗೆರೆ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಲಂಚದ ಹಣವನ್ನು ಪಡೆದು ಕರ್ತವ್ಯ

ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(ಎ) ರನ್ವಯ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಳ್ಳಲಾಗಿದೆ. ದಾವಣಗೆರೆ ಎ.ಸಿ.ಬಿ ಪೊಲೀಸ್ ಠಾಣೆ ಮೊಕದ್ದಮೆ **ಸಂ: 02/2020** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

2. **ದೂರಿನ ಸಂಕ್ಷಿಪ್ತ ಸಾರಾಂಶ**:- ದೂರುದಾರರು ತನ್ನ ತಾಯಿ ಮಲ್ಲಮ್ಮ ರವರ ಹೆಸರಿನಲ್ಲಿರುವ ದಾನಿಹಳ್ಳಿ ಗ್ರಾಮದಲ್ಲಿ ಸುಮಾರು 18 * 12 ಅಡಿ ವಿಸ್ತೀರ್ಣದಲ್ಲಿ ಹೊಸದಾಗಿ ಆರ್‌ಸಿಸಿ ಮನೆಯನ್ನು ನಿರ್ಮಿಸಿದ್ದು, ಸದರಿ ಮನೆಯನ್ನು ಬ್ಯಾಂಕ್‌ನಲ್ಲಿ ಅಡವಿರಿಸಿ ಸಾಲ ಪಡೆಯುವ ಸಂಬಂಧ ಬ್ಯಾಂಕಿನ ಅಧಿಕಾರಿಗಳು ಕೋರಿದಂತೆ ಸದರಿ ಮನೆಯ ಈ ಸ್ವತ್ತನ್ನು ಪಡೆಯಲು ದಿ:09-01-2020 ರಂದು ದಾನಿಹಳ್ಳಿ ಗ್ರಾಮವು ಒಳಪಡುವ ಗಂಗನಕೋಟೆ ಗ್ರಾಮಪಂಚಾಯತಿಗೆ ಹೋಗಿ ಪಿಡಿಒ ಬಗ್ಗೆ ವಿಚಾರಿಸಿದಾಗ ಪಿಡಿಒ ರವರು ಕಛೇರಿಯಲ್ಲಿ ಇಲ್ಲದಿರುವಾಗ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎದುರುದಾರರು ದೂರುದಾರರಿಗೆ "ಯಾತಕ್ಕೆ ಬಂದ್ದಿದ್ದೀರಾ" ಎಂದು ವಿಚಾರಿಸಿದ್ದು, ದೂರುದಾರರು ಬ್ಯಾಂಕ್ ಲೋನ್ ಪಡೆಯುವ ಬಗ್ಗೆ ವಿವರಿಸಿ ಲೋನ್ ಪಡೆಯಲು ಈ ಸ್ವತ್ತನ್ನು ಅಥವಾ 9 ಮತ್ತು 10 ದಾಖಲಾತಿ ಪಡೆಯಲು ಅರ್ಜಿ ಸಲ್ಲಿಸಲು ಬಂದಿರುವುದಾಗಿ ತಿಳಿಸಿದಾಗ, ಎದುರುದಾರರು "ಈ ಸ್ವತ್ತು ಪಡೆಯಲು ಅರ್ಜಿ ಕೊಡಬೇಕು ಅದೆಲ್ಲಾ ಪ್ರೊಸೆಸ್ ಆಗಿ ತುಂಬಾ ಲೇಟ್ ಆಗುತ್ತೆ. ಪಂಚಾಯಿತಿಯಿಂದ 9 ಮತ್ತು 11 ದಾಖಲೆ ರೆಡಿ ಮಾಡಿಸಿ ಕೊಡ್ತೀನಿ ಅದನ್ನು ಬ್ಯಾಂಕಿಗೆ ಕೊಡು ನಿನಗೆ ಬ್ಯಾಂಕಿನವರು ಸಾಲ ಕೊಡುತ್ತಾರೆ" ಎಂದು ಹೇಳಿ ದೂರುದಾರರು ತಂದಿದ್ದ ಅರ್ಜಿಯನ್ನು ತೆಗೆದುಕೊಂಡಿರುವುದಿಲ್ಲ.

3. ನಂತರ ಎದುರುದಾರರು "9 ಮತ್ತು 11 ದಾಖಲೆಯನ್ನು ಕೊಡುವುದಕ್ಕೆ ರೂ.7,000/- ಖರ್ಚಾಗುತ್ತೆ ಅದನ್ನು ನನಗೆ ಕೊಟ್ಟರೆ 9 ಮತ್ತು 11 ದಾಖಲೆ ಕೊಡಿಸ್ತಿನಿ" ಎಂದು ಹೇಳಿದ್ದು, ಅದಕ್ಕೆ ದೂರುದಾರರು ತಾನು "ಮೊದಲಿಗೆ ರೂ.5,000/- ಕೊಡ್ತೀನಿ, ಲೋನ್ ಆದಮೇಲೆ ಉಳಿದ ರೂ.2,000/- ಕೊಡ್ತೀನಿ" ಎಂದು ಹೇಳಿದ್ದರಿಂದ, ದಿ: 20-01-2020 ರಂದು ಎದುರುದಾರರು ದೂರುದಾರರ ಗ್ರಾಮಕ್ಕೆ ಬಂದಿದ್ದಾಗ ರೂ.5,000/- ಹಣಕ್ಕೆ ಒತ್ತಾಯ ಮಾಡಿದಾಗ ದೂರುದಾರರು ತನ್ನ ಬಳಿ ಇದ್ದ ರೂ.2,500/- ಗಳನ್ನು ಎದುರುದಾರರಿಗೆ ನೀಡಿರುತ್ತಾರೆ.

4. ನಂತರ, ದಿ:24-01-2020 ರಂದು ಸಂಜೆ 5.00 ಗಂಟೆ ಸುಮಾರಿಗೆ ದೂರುದಾರರು ತನ್ನ ಫೋನ್ ಸಂ. 9980568326 ರಿಂದ ಎದುರುದಾರರ ಫೋನ್ ಸಂ. 8310531499 ಕ್ಕೆ ಫೋನ್ ಮಾಡಿ ತನ್ನ ದಾಖಲೆ ರೆಡಿ ಆಯ್ತಾ ಎಂದು ಕೇಳಿದ್ದಕ್ಕೆ ಎದುರುದಾರರು "ನಾನು ಈಗ ಹೊನ್ನಾಳಿಯಲ್ಲಿ ಇದ್ದೀನಿ ಹೊನ್ನಾಳಿ ಟಿ.ಬಿ. ಸರ್ಕಲ್ ಹತ್ತಿರ ಬಾ" ಅಂತ ಕರೆದಿದ್ದು, ಆಗ ದೂರುದಾರರು ಹೊನ್ನಾಳಿ ಟಿ.ಬಿ. ಸರ್ಕಲ್‌ನಲ್ಲಿ ಸಂಜೆ 7.00 ಗಂಟೆಗೆ ಎದುರುದಾರರನ್ನು ಭೇಟಿಯಾಗಿ 9 ಮತ್ತು 11 ರ ದಾಖಲೆ ಕೊಡುವಂತೆ ಕೇಳಿದಾಗ, ಎದುರುದಾರರು "ಬಾಕಿ ಒಟ್ಟು ರೂ.3,500/- ಕೊಡು ಅದರಲ್ಲಿ ರೂ.1,000/- ರಸೀದಿ ಹಾಕ್ತೀನಿ" ಎಂದು ಲಂಚದ ಹಣ ಬೇಡಿಕೆಯಿಟ್ಟಿದ್ದು, ಅದಕ್ಕೆ ದೂರುದಾರರು "ಆಯ್ತು ಸರ್ ನಾಳೆ ಬರ್ತೀನಿ" ಎಂದು ಹೇಳಿ ವಾಪಸ್ ಊರಿಗೆ ಬಂದಿರುತ್ತಾರೆ. ದೂರುದಾರರು ಹೊನ್ನಾಳಿ ಟಿ.ಬಿ. ಸರ್ಕಲ್‌ನಲ್ಲಿ ಎದುರುದಾರರೊಂದಿಗೆ ನಡೆದ ನೇರ ಸಂಭಾಷಣೆಯನ್ನು ತನ್ನ ರೆಡ್‌ಮಿ ಕಂಪನಿಯ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

5. ಮರುದಿನ ದಿ:25-01-2020 ರಂದು ಸಂಜೆ 6.00 ಗಂಟೆ ಸುಮಾರಿಗೆ ಎದುರುದಾರರು ಅವರ ಫೋನ್ ಸಂ. 8310531499 ರಿಂದ

ದೂರುದಾರರ ಫೋನ್ ಸಂ. 9980568326 ಕ್ಕೆ ಫೋನ್ ಮಾಡಿ ಲಂಚದ ಹಣಕ್ಕೆ ಒತ್ತಾಯ ಮಾಡಿರುತ್ತಾರೆ. ಈ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

6. ದೂರುದಾರರಿಗೆ ಲಂಚವನ್ನು ಕೊಟ್ಟು ತಮ್ಮ ಕೆಲಸ ಮಾಡಿಸಿಕೊಳ್ಳಲು ಇಚ್ಛೆ ಇಲ್ಲದ ಕಾರಣ ದಿನಾಂಕ:27/01/2020 ರಂದು ದಾವಣಗೆರೆ ಎ.ಸಿ.ಬಿ. ಪೋಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ದಾವಣಗೆರೆ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 02/2020 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

7. ಪ್ರಕರಣ ದಾಖಲಾದ ನಂತರ, ತನಿಖಾಧಿಕಾರಿಗಳು ಅದೇ ದಿನ ಅಂದರೆ ದಿ: 27/01/2020 ಮಧ್ಯಾಹ್ನ 12-00 ಗಂಟೆಗೆ ಸರ್ಕಾರಿ ಪಂಚರುಗಳಾದ 1) ಶ್ರೀ ಪುಟ್ಟಪ್ಪನವರ ಪರಮೇಶ ಬಿನ್ ಯಲ್ಲಪ್ಪ ಮತ್ತು 2) ಶ್ರೀಮತಿ ಗಾಯತ್ರಿ ಹೆಚ್.ಎಸ್. ಕೋಂ ಪಿ.ಜೆ ವೀರಯ್ಯ ಅವರುಗಳನ್ನು ಬರಮಾಡಿಕೊಂಡು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಮತ್ತು ಸಿಬ್ಬಂದಿಗೆ ಪರಿಚಯ ಮಾಡಿಸಿ, ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು ಅದನ್ನು ಓದಿ ಅದರಲ್ಲಿಯ ವಿಷಯವನ್ನು ತಿಳಿದುಕೊಂಡು ಮತ್ತು ಅದರಲ್ಲಿನ ವಿಷಯ ನಿಜವೆಂದು ದೂರುದಾರರಿಂದ ಖಚಿತಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚರ ಸಮಕ್ಷಮ ದೂರುದಾರರು ಒಂದು ರೆಡ್‌ಮಿ ಕಂಪನಿಯ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಸದರಿ ಮೊಬೈಲ್ ರೆಕಾರ್ಡ್‌ನಲ್ಲಿಯ ಸಂಭಾಷಣೆಗಳನ್ನು ಪಂಚರುಗಳಿಗೆ ಕೇಳಿಸಿ ಸಿಬ್ಬಂದಿಯವರಿಂದ ಸದರಿ ಸಂಭಾಷಣೆಯನ್ನು ಲೇಖಿ ಮಾಡಿಸಿರುತ್ತಾರೆ. ಸದರಿ ಸಂಭಾಷಣೆಯಲ್ಲಿ ಎದುರುದಾರರು ಲಂಚದ ಹಣಕ್ಕೆ ಬೇಡಿಕೆಯಿಟ್ಟಿರುವುದು ಕಂಡುಬರುತ್ತದೆ. ನಂತರ ತನಿಖಾಧಿಕಾರಿಗಳು

ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ದೂರುದಾರರ ಮತ್ತು ಎದುರುದಾರರ ನಡುವಿನ ಸಂಭಾಷಣೆಗಳನ್ನು ಕಂಪ್ಯೂಟರ್ ಮುಖಾಂತರ ಸಿಡಿಗೆ ವರ್ಗಾಯಿಸಿಕೊಂಡು ಸದರಿ ಸಿಡಿಯನ್ನು ಒಂದು ಪೇಪರ್ ಕವರನಲ್ಲಿ ಹಾಕಿ ಚೀಟಿ ಅಂಟಿಸಿ ಅದಕ್ಕೆ ಸಹಿ ಮಾಡಿ ಮತ್ತು ಪಂಚರುಗಳ ಸಹಿ ಪಡೆದು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

8. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಲಂಚ ನೀಡಲು ತಂದ (ರೂ.500/- ಮುಖಬೆಲೆಯ 6-ನೋಟುಗಳು) ಒಟ್ಟು 3,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ 1ನೇ ಪಂಚರು ಸದರಿ ನೋಟುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ಓದಿ ಹೇಳಿದಂತೆ ಪಂಚ-2 ರವರು ಸದರಿ ನೋಟುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿದ್ದು, .ಸದರಿ ಹಾಳೆಯನ್ನು ತನಿಖಾಧಿಕಾರಿಗಳು ಪಂಚರುಗಳ ಸಹಿ ಪಡೆದು ತಮ್ಮ ವಶಕ್ಕೆ ಪಡೆದಿರುತ್ತಾರೆ.

9. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪೊಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ಎರಡೂ ಬದಿಗಳಿಗೆ ಸವರಿದ್ದು, ಪಂಚ-2 ರವರು ಸದರಿ ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಮತ್ತೊಮ್ಮೆ ಎಣಿಸಿ ಅವುಗಳ ನಂಬರ್ ಮತ್ತು ಮೌಲ್ಯ ನಮೂದು ಮಾಡಿಕೊಂಡಿರುವುದಕ್ಕೆ ತಾಳೆಯಾಗುತ್ತಿರುವ ಬಗ್ಗೆ ಖಾತ್ರಿ ಮಾಡಿಕೊಂಡು ನೋಟುಗಳನ್ನು ದೂರುದಾರರು ಧರಿಸಿದ್ದ ಶರ್ಟಿನ ಎದೆಯ ಜೇಬಿನೊಳಗೆ ಇಟ್ಟಿರುತ್ತಾರೆ. ನಂತರ ಪಂಚ ಸಾಕ್ಷಿ-2 ರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು,

ಫಿನಾಫ್ತಲಿನ್ ಪೌಡರ್‌ನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ, ಬೇರೆ ಯಾವುದೇ ಸ್ಥಳದಲ್ಲಿ ಇಡದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಎಲ್ಲಿಟ್ಟು ಕೊಳ್ಳುತ್ತಾರೆ ಎಂಬುದನ್ನು ಅವರಿಗೆ ಅನುಮಾನ ಬಾರದ ರೀತಿಯಲ್ಲಿ ಗಮನಿಸಿಕೊಳ್ಳುವಂತೆ, ಒಂದು ವೇಳೆ ಅವರು ಲಂಚದ ಹಣವನ್ನು ಮೂರನೇ ವ್ಯಕ್ತಿಗೆ ಕೊಡುವಂತೆ ಹೇಳಿದಲ್ಲಿ 3ನೇ ವ್ಯಕ್ತಿಗೆ ನೀಡುವಂತೆ ಮತ್ತು ಅವರು ಅದನ್ನು ಯಾವ ರೀತಿಯಲ್ಲಿ ಪಡೆದುಕೊಳ್ಳುತ್ತಾರೆ. ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಅವರಿಗೆ ಅನುಮಾನ ಬಾರದ ರೀತಿಯಲ್ಲಿ ಗಮನಿಸಿಕೊಂಡು ನಂತರ ಹೊರಗಡೆ ಬಂದು ತನ್ನ ತಲೆಯನ್ನು ಕೆರೆದುಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಹಾಗೂ ಪಂಚ-1 ರವರಿಗೆ ಹಣ ಕೊಡುವ ಕಾಲಕ್ಕೆ ದೂರುದಾರರೊಂದಿಗೆ ಹೋಗಿ ಹತ್ತಿರದಲ್ಲಿದ್ದು, ಅಲ್ಲಿ ಏನು ನಡೆಯುತ್ತದೆ ಎಂಬುದನ್ನು ಗಮನಿಸಿ ತಮಗೆ ತಿಳಿಸುವಂತೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಒಂದು ಇಲಾಖಾ ಸೋನಿ ಕಂಪನಿಯ ವಾಯ್ಸ್ ರೆಕಾರ್ಡರ್‌ನ್ನು ಕೊಟ್ಟಿದ್ದು, ಎದುರುದಾರರನ್ನು ಭೇಟಿಯಾದಾಗ ಆನ್ ಮಾಡಿಕೊಂಡು ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಸಿಬ್ಬಂದಿಯಿಂದ ಫೋಟೋಗಳನ್ನು ತೆಗೆಯಿಸಿ, ವಿಡಿಯೋ ಚಿತ್ರೀಕರಣ ಮಾಡಿಸಿ ದಿನಾಂಕ: 27/01/2020 ರಂದು ಮಧ್ಯಾಹ್ನ 12-15 ಗಂಟೆಯಿಂದ ಮಧ್ಯಾಹ್ನ 02-00 ಗಂಟೆಯವರೆಗೆ ದಾವಣಗೆರೆ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು

ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

10. ಅದೇ ದಿನ ಅಂದರೆ ದಿನಾಂಕ: 27/01/2020 ರಂದು ಮಧ್ಯಾಹ್ನ 02-30 ಗಂಟೆ ಸಮಯದಲ್ಲಿ ಎಸಿಬಿ ಕಛೇರಿಯಿಂದ ಇಲಾಖಾ ವಾಹನದಲ್ಲಿ ದಾಳಿ ತಂಡದವರು, ದೂರುದಾರರು ಹೊರಟು ಮಧ್ಯಾಹ್ನ 3-30 ಗಂಟೆ ಸಮಯದಲ್ಲಿ ಹೊನ್ನಾಳಿ ತಲುಪಿ, ಹೊನ್ನಾಳಿ ಪಟ್ಟಣದ ಹೊರ ವಲಯದಲ್ಲಿ ತುಂಗಭದ್ರಾ ನದಿ ಸೇತುವೆ ಬಳಿ ವಾಹನವನ್ನು ನಿಲ್ಲಿಸಿಕೊಂಡು, ತನಿಖಾಧಿಕಾರಿಗಳ ಸೂಚನೆಯಂತೆ ದೂರುದಾರರು ತನ್ನ ಫೋನ್ ಸಂಖ್ಯೆ: 9980568326 ರಿಂದ ಎದುರುದಾರರ ಫೋನ್ ಸಂಖ್ಯೆ:8310531499 ಕ್ಕೆ ಕರೆ ಮಾಡಿ ಮಾತನಾಡಿದಾಗ ಎದುರುದಾರರು “ಇವತ್ತು ಆಗುವುದಿಲ್ಲ, ಯಾರು ಸಿಗುವುದಿಲ್ಲ, ನಾಳೆ ಬೆಳಿಗ್ಗೆ ಬಾ ಅಂತಾ ಹೇಳಿದ್ದು, ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ತನಿಖಾಧಿಕಾರಿಗಳು ಪಂಚರಿಗೆ ಕೇಳಿಸಿ, ನಂತರ ಸಿಬ್ಬಂದಿಯವರಿಗೆ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಕಂಪ್ಯೂಟರ್ ಮುಖಾಂತರ ಸಿ.ಡಿ.ಗೆ ವರ್ಗಾಯಿಸಿದ್ದು, ಸದರಿ ಸಿ.ಡಿ.ಯನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಇಟ್ಟುಕೊಂಡಿರುತ್ತಾರೆ ಮತ್ತು ಸದರಿ ಸಂಭಾಷಣೆಯ ತದ್ರೂಪಿ ಸಿ.ಡಿ. ಯನ್ನು ಸಹ ಮಾಡಿ ತನಿಖಾಧಿಕಾರಿಗಳು ಕಡತಕ್ಕೆ ಅಳವಡಿಸಿ ಕೊಂಡಿರುತ್ತಾರೆ. ಹಾಗೂ ತನಿಖೆಯನ್ನು ನಾಳೆಗೆ ಮುಂದೂಡುವ ಬಗ್ಗೆ ದೂರುದಾರರಿಗೆ ಮತ್ತು ಪಂಚರುಗಳಿಗೆ ತಿಳಿಸಿ, ಎದುರುದಾರರಿಗೆ ಕೊಡಬೇಕಾಗಿರುವ ರೂ.3,000/- ಗಳ ಲಂಚದ ಹಣವನ್ನು ಜೋಪಾನವಾಗಿ ಇಟ್ಟುಕೊಳ್ಳಲು, ಮತ್ತು ಮುಂದಿನ ಕಾರ್ಯಾಚರಣೆ ಸಮಯದಲ್ಲಿ ಹಾಜರುಪಡಿಸಲು ದೂರುದಾರರಿಗೆ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಸದರಿ ಕಾರ್ಯಾಚರಣೆಯನ್ನು ಗುಪ್ತವಾಗಿ ಇಡಲು

ದೂರುದಾರರಿಗೆ ಮತ್ತು ಪಂಚರಿಗೆ ತಿಳಿಸಿ, ದಿನಾಂಕ:28/01/2020 ರಂದು ಬೆಳಿಗ್ಗೆ 7-00 ಘಂಟೆಗೆ ಎಸಿಬಿ ಪೊಲೀಸ್ ಠಾಣೆಗೆ ಹಾಜರಾಗುವಂತೆ ತಿಳಿಸಿ ಮತ್ತು ದೂರುದಾರರ ಕೋರಿಕೆಯಂತೆ ದೂರುದಾರರ ಸ್ವಂತ ಊರು ಹೊನ್ನಾಳಿ ಪಟ್ಟಣದ ಪಕ್ಕದ ಹಳ್ಳಿಯಾಗಿದ್ದರಿಂದ ದಿನಾಂಕ:28/01/2020 ರಂದು ಬೆಳಿಗ್ಗೆ 8-00 ಘಂಟೆಗೆ ಹೊನ್ನಾಳಿ ಪಟ್ಟಣದ ಹೊರ ವಲಯದಲ್ಲಿರುವ ನಂದಿನಿ ಮಿಲ್ಕ್ ಡೈರಿ ಬಳಿ ಹಾಜರಿರುವಂತೆ ಸೂಚಿಸಿರುತ್ತಾರೆ. ಈ ಬಗ್ಗೆ ಟ್ರ್ಯಾಪ್ ಕಾರ್ಯಾಚರಣೆ ಮುಂದೂಡಿದ ಬಗ್ಗೆ ಪಂಚನಾಮೆಯನ್ನು ಸಂಜೆ 5-15 ರಿಂದ 6-00 ಘಂಟೆಯವರೆಗೆ ಸಿಬ್ಬಂದಿ ಪಂಚರುಗಳ ಹೇಳಿಕೆಯಂತೆ ಉಕ್ತ ಲೇಖನ ನೀಡಿ ಗಣಕೀಕರಣ ಮಾಡಿಸಿರುತ್ತಾರೆ.

11. ದಿನಾಂಕ:28/01/2020 ರಂದು ಬೆಳಿಗ್ಗೆ 7-00 ಘಂಟೆಗೆ ಈ ಮೇಲೆ ಹೇಳಿದ ಪಂಚರುಗಳು ದಾವಣಗೆರೆ ಎಸಿಬಿ ಪೊಲೀಸ್ ಠಾಣೆಗೆ ಹಾಜರಾಗಿದ್ದು, ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರುಗಳೊಂದಿಗೆ ದಾವಣಗೆರೆ ಎಸಿಬಿ ಪೊಲೀಸ್ ಠಾಣೆಯಿಂದ ಇಲಾಖಾ ವಾಹನಗಳಲ್ಲಿ ಹೊರಟು ಬೆಳಿಗ್ಗೆ 8-30 ಘಂಟೆಗೆ ಹೊನ್ನಾಳಿಯ ಹೊರ ವಲಯದಲ್ಲಿರುವ ನಂದಿನಿ ಮಿಲ್ಕ್ ಡೈರಿಯನ್ನು ತಲುಪಿದ್ದು, ಅಲ್ಲಿ ದೂರುದಾರರು ಹಾಜರಿದ್ದು, ತನಿಖಾಧಿಕಾರಿಗಳು ಮುಂದಿನ ತನಿಖೆಯನ್ನು ಕೈಗೊಳ್ಳುವುದಾಗಿ ಹಾಗೂ ತನಿಖೆಗೆ ಸಹಕರಿಸುವಂತೆ ಪಂಚರುಗಳಿಗೆ ಹೇಳಿದ್ದು, ಅವರು ಒಪ್ಪಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ದಿನಾಂಕ:27/01/2020 ರಂದು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಫಿನಾಫ್ತಲಿನ್ ಪುಡಿಯನ್ನು ಸವರಿದ್ದ ನೋಟುಗಳನ್ನು ಹಾಜರಪಡಿಸುವಂತೆ ಸೂಚಿಸಿದ್ದು, ದೂರುದಾರರು ಅವುಗಳನ್ನು ಹಾಜರಪಡಿಸಿದ್ದು, ಅವುಗಳನ್ನು ಪಂಚರು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬಿಳಿ ಹಾಳೆಯಲ್ಲಿ ಬರೆದು ಇಟ್ಟುಕೊಂಡಿದ್ದ

ನೋಟಿನ ನಂಬರ್ ಹಾಗೂ ಮೌಲ್ಯಗಳನ್ನು ಪರಿಶೀಲಿಸಿದ್ದು, ಪಂಚ-2 ರವರು ಸದರಿ ನೋಟುಗಳನ್ನು ದೂರುದಾರರ ಶರ್ಟಿನ ಎದೆ ಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಟ್ರ್ಯಾಪ್ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮತ್ತೊಮ್ಮೆ ಮಾಹಿತಿಯನ್ನು ನೀಡಿರುತ್ತಾರೆ. ಈ ಎಲ್ಲಾ ನಡಾವಳಿಯ ಕುರಿತಂತೆ ಪಂಚನಾಮೆಯನ್ನು ಬೆಳಿಗ್ಗೆ 8-45 ಘಂಟೆಯಿಂದ ಬೆಳಿಗ್ಗೆ 9-15 ಘಂಟೆಯವರೆಗೆ ತನಿಖಾಧಿಕಾರಿಗಳು, ಸಿಬ್ಬಂದಿಗೆ ಪಂಚರ ಸಮಕ್ಷಮ ಪಂಚರ ಹೇಳಿಕೆಯಂತೆ ಉಕ್ತ ಲೇಖನ ನೀಡಿ ಹೊನ್ನಾಳಿ ಪಟ್ಟಣದ ಹೊನ್ನಾಳಿ ಮಲೆಬೆನ್ನೂರ ಮುಖ್ಯ ರಸ್ತೆಯ ಹೊರ ವಲಯದಲ್ಲಿರುವ ನಂದಿನಿ ಮಿಲ್ಕ್ (ಶೀತಲಿಕರಣ ಘಟಕ) ಎದುರು ಬರೆಸಿರುತ್ತಾರೆ.

12. ನಂತರ ತನಿಖಾಧಿಕಾರಿಗಳು ಪಂಚನಾಮೆ ಮುಗಿದ ನಂತರ ಇಲಾಖಾ ವಾಹನಗಳಲ್ಲಿ ಪಂಚರು, ದೂರುದಾರರು ಹಾಗೂ ಸಿಬ್ಬಂದಿಯೊಂದಿಗೆ ಹೊರಟು ಬೆಳಿಗ್ಗೆ 9-30 ರ ಸಮಯಕ್ಕೆ ಹೊನ್ನಾಳಿ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ತಲುಪಿದ್ದು, ಆಗ ದೂರುದಾರರು ತನಿಖಾಧಿಕಾರಿಗಳ ಸೂಚನೆಯಂತೆ ತನ್ನ ಮೋಬೈಲ್ ನಂ:9980568326 ರಿಂದ ಎದುರುದಾರರ ಫೋನ್ ಸಂಖ್ಯೆ:8310531499 ಕ್ಕೆ ಫೋನ್ ಮಾಡಿ ಹೊನ್ನಾಳಿ ಖಾಸಗಿ ಬಸ್ ನಿಲ್ದಾಣ ಬಳಿ ಇರುವುದಾಗಿ ತಿಳಿಸಿದಾಗ ಎದುರುದಾರರು "ಆಯ್ತು 9 ಮತ್ತು 11 ಫಾರಂಗಳನ್ನು ತೆಗೆದುಕೊಂಡು ಅಲ್ಲೆ ಇರುವ ಕುರಿ ಮಾರ್ಕೆಟ್ ಬಳಿ ಇರು, ನಾನು ಮನೆಯಲ್ಲಿ ಇದ್ದೇನೆ ಸ್ವಲ್ಪ ಹೊತ್ತು ಬಿಟ್ಟು ಬರುತ್ತೇನೆ" ಎಂದು ತಿಳಿಸಿದ ಪ್ರಯುಕ್ತ ದೂರುದಾರರು ತಾಲ್ಲೂಕು ಕಛೇರಿ ಬಳಿ ಒಂದು ಅಂಗಡಿಯಿಂದ 9 ಮತ್ತು 11 ಫಾರಂಗಳನ್ನು ತೆಗೆದುಕೊಂಡು ಬಂದಿದ್ದು, ಆಗ ತನಿಖಾಧಿಕಾರಿಗಳ ಸೂಚನೆಯಂತೆ ದೂರುದಾರರು ನೆರಳು ಸಾಕ್ಷಿ ಶ್ರೀ ಪುಟ್ಟಪ್ಪನವರ ಪರಮೇಶ ರವರೊಂದಿಗೆ ಕುರಿ ಮಾರ್ಕೆಟ್ ಬಳಿಯ ಸರ್ವರ್ ಕೇರಿ ರಸ್ತೆಯಲ್ಲಿ ಇದ್ದು,

ಎದುರುದಾರರಿಗೆ ಕಾಯುತ್ತಿದ್ದು, ಉಳಿದವರೆಲ್ಲರೂ ಬಸ್ ನಿಲ್ದಾಣದ ಮತ್ತು ಕುರಿ ಮಾರ್ಕೆಟ್ ಸುತ್ತ ಮುತ್ತ ದೂರುದಾರರಿಗೆ ಕಾಣುವಂತೆ ಗಮನಿಸುತ್ತಾ ಇದ್ದಾಗ ಒಬ್ಬ ವ್ಯಕ್ತಿ ಕೆಎ-17 ಇಆರ್-6882 ನೇ ಬಜಾಜ್ ಡಿಸ್ಕವರಿ ಬೈಕ್‌ನಲ್ಲಿ ಬಂದು ಬೈಕ್‌ನಲ್ಲಿಯೇ ಕುಳಿತುಕೊಂಡು ದೂರುದಾರರೊಂದಿಗೆ ಮಾತನಾಡಿ ದೂರುದಾರರಿಂದ 9 ಮತ್ತು 11 ಫಾರಂಗಳನ್ನು ಪಡೆದುಕೊಂಡು ತನ್ನ ಹೆಗಲಿನಲ್ಲಿ ಹಾಕಿಕೊಂಡಿದ್ದ ಬ್ಯಾಗ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರಿಂದ ಹಣವನ್ನು ಕೇಳಿ ಪಡೆದುಕೊಂಡು ಎಣಿಸಿಕೊಂಡು ತನ್ನ ಶರ್ಟಿನ ಎಡ ಭಾಗದ ಎದೆ ಜೇಬಿನಲ್ಲಿ ಇಟ್ಟುಕೊಂಡಾಗ ದೂರುದಾರರು ತನ್ನ ತಲೆಯನ್ನು ಕೆರೆದುಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡಿದ್ದು, ತಕ್ಷಣ ಸಿಬ್ಬಂದಿಗಳು ಎದುರುದಾರರನ್ನು ಹಿಡಿದುಕೊಂಡಿದ್ದು, ಆಗ ತನಿಖಾಧಿಕಾರಿಗಳು ದೂರುದಾರರಿಂದ ವಾಯ್ಸ್ ರೆಕಾರ್ಡರ್‌ನ್ನು ಪಡೆದು ನೋಡಲಾಗಿ ರೆಕಾರ್ಡ್ ಆಗುತ್ತಿದ್ದು, ಅದನ್ನು ಆಫ್ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಘಟನೆ ಬಗ್ಗೆ ವಿಚಾರಿಸಲಾಗಿ ದೂರುದಾರರು ಎದುರುದಾರರನ್ನು ತೋರಿಸಿ "ಈತನೇ ಸಾಗರ್, ಬಿಲ್ ಕಲೆಕ್ಟರ್, ಇವರು ತನ್ನ ಬಳಿ ಬಂದು 9 ಮತ್ತು 11 ಫಾರಂಗಳನ್ನು ಪಡೆದುಕೊಂಡು ನಂತರ ಬಾಕಿ ಹಣವನ್ನು ಕೇಳಿದಾಗ ತಾನು ರೂ. 3,000/- ಗಳ ಪಿನಾಫ್ತಲಿನ್ ಪೌಡರ್ ಸವರಿದ್ದ ಲಂಚದ ಹಣವನ್ನು ಅವರಿಗೆ ಕೊಟ್ಟಿದ್ದು, ಅವರು ಹಣವನ್ನು ಎಣಿಸಿಕೊಂಡು ತನ್ನ ಶರ್ಟಿನ ಎಡ ಭಾಗದ ಎದೆಯ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ" ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಈ ಬಗ್ಗೆ ನೆರಳು ಸಾಕ್ಷಿದಾರರಿಗೆ ವಿಚಾರಿಸಿದ್ದು, ಅವರು ಸಹ ದೂರುದಾರರು ಹೇಳಿರುವುದು ಸತ್ಯವೆಂದು ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ತಮ್ಮ ಪರಿಚಯ ಮಾಡಿಕೊಂಡಿರುತ್ತಾರೆ.

13. ಎದುರುದಾರರು ಇದ್ದ ಸ್ಥಳವು ಸಾರ್ವಜನಿಕ ರಸ್ತೆಯಾಗಿದ್ದು, ಮುಂದಿನ ತನಿಖೆಗೆ ತೊಂದರೆಯಾಗುತ್ತದೆ ಎಂದು ತನಿಖಾಧಿಕಾರಿಗಳು, ಎದುರುದಾರರನ್ನು ಅಲ್ಲೆ ಪಕ್ಕದಲ್ಲಿ ಇದ್ದ ಸಹಾಯಕ ಕಾರ್ಯಪಾಲಕ ಇಂಜನಿಯರರವರ ಕಚೇರಿ, ಪಂಚಾಯತ ರಾಜ್ ಇಂಜನಿಯರಿಂಗ್ ಉಪ-ವಿಭಾಗ, ಹೊನ್ನಾಳಿ ರವರ ಕಚೇರಿಗೆ ಕರೆದುಕೊಂಡು ಹೋಗಿ, ಅಲ್ಲಿ ಹಾಜರಿದ್ದ ಶ್ರೀ ನಾಗರಾಜ, ಸಹಾಯಕ ಇಂಜನಿಯರ್ ರವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿ ಪ್ರಕರಣದ ಮುಂದಿನ ತನಿಖೆ ಸಂಬಂಧ ಪಂಚನಾಮೆ ಜರುಗಿಸ ಬೇಕಾಗಿರುವುದರಿಂದ ಸ್ಥಳಾವಕಾಶ ಬೇಕಾಗಿರುವುದರಿಂದ ಅನುಮತಿ ಕೊಡಿ ಎಂದು ಮೌಖಿಕವಾಗಿ ಕೋರಿ ಪಂಚನಾಮೆಯನ್ನು ಮುಂದುವರೆಸಿರುತ್ತಾರೆ.

14. ನಂತರ ತನಿಖಾಧಿಕಾರಿಗಳು ಪಂಚರುಗಳಿಗೆ ಎದುರುದಾರರ ಪರಿಚಯ ಹೇಳಿ ಮತ್ತು ಅವರ ಪರಿಚಯ ಕೇಳಿ, ಅವರ ಹೆಸರು, ವಿಳಾಸ ಪಡೆದು, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ನೀಡಿದ್ದ ಸೋನಿ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಆಗಿದ್ದ, ದೂರುದಾರರ ಮತ್ತು ಎದುರುದಾರರ ಸಂಭಾಷಣೆಯನ್ನು ಪಂಚರುಗಳಿಗೆ ಕೇಳಿಸಿ, ತಮ್ಮ ಸಿಬ್ಬಂದಿ ಮುಖಾಂತರ ಸಂಭಾಷಣೆಯನ್ನು ಲೇಖಿ ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಿಬ್ಬಂದಿಯಿಂದ ತಯಾರಿಸಲ್ಪಟ್ಟ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ದ್ರಾವಣವನ್ನು ಎರಡು ಪ್ರತ್ಯೇಕ ಬಾಟಲ್‌ಗಳಲ್ಲಿ ಶೇಖರಿಸಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ಲಂಚದ ಹಣವನ್ನು ಹಾಜರುಪಡಿಸಲು ಸೂಚಿಸಿದಾಗ,

ಅವರು ತಮ್ಮ ಶರ್ಟಿನ ಜೇಬಿನಲ್ಲಿರಿಸಿಕೊಂಡಿದ್ದ ಹಣವನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚರು ಸದರಿ ಹಣವನ್ನು ಪರಿಶೀಲಿಸಿದ್ದು, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರಿಗೆ ಹಾಗೂ ಮೌಲ್ಯಕ್ಕೆ ತಾಳೆಯಾಗಿರುತ್ತವೆ. ಸದರಿ ನೋಟುಗಳ ಮೌಲ್ಯ ಮತ್ತು ನಂಬರ್‌ಗಳನ್ನು ಬರೆದುಕೊಂಡಿದ್ದ ಹಾಳೆಗೆ ಪಂಚರುಗಳ ಸಹಿ ಪಡೆದು, ತಮ್ಮ ವಶದಲ್ಲಿ ಇಟ್ಟುಕೊಂಡು ನೋಟುಗಳನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲಿ ಶರ್ಟಿನ ವ್ಯವಸ್ಥೆ ಮಾಡಿ ಅವರು ಧರಿಸಿದ್ದ ಶರ್ಟನ್ನು ಬಿಚ್ಚಿಸಿ ಶರ್ಟಿನ ಎಡ ಜೇಬನ್ನು ತಿರುವು ಮಾಡಿ ಈಗಾಗಲೇ ತಯಾರಿಸಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದ್ದು, ಅದು ಸಹ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಸದರಿ ದ್ರಾವಣವನ್ನು ಸಹ ಬಾಟಲ್‌ಗೆ ಶೇಖರಿಸಿ ಸೀಲ್ ಮಾಡಿ ಸದರಿ ಬಾಟಲ್‌ನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಹಾಗೂ ಶರ್ಟನ್ನು ಸಹ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ.

15. ತನಿಖಾಧಿಕಾರಿಗಳು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಹಾಗೂ ಹಣವನ್ನು ಸ್ವೀಕರಿಸಿದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಅವರ ಸ್ವ-ರಕ್ಷಣಾ ಸಮಜಾಯಿಷಿಯನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಟ್ಟಿದ್ದು, ಸದರಿ ಸಮಜಾಯಿಷಿಯಲ್ಲಿ ಎದುರುದಾರರು "ಶ್ರೀ ಸಚಿನ್ ಬಿನ್ ಷಣ್ಮುಖಪ್ಪ ಇವರಿಂದ ರೂ.3,000/- ಲಂಚ ಪಡೆದಿರುತ್ತೀರ ಎಂದು ನೋಟೀಸ್ ನೀಡಿರುತ್ತೀರಿ, ಆದರೆ ನಾನು ಯಾವುದೆ ಹಣವನ್ನು ಲಂಚವನ್ನು ತೆಗೆದುಕೊಂಡಿರುವುದಿಲ್ಲ. ಶ್ರೀ ಸಚಿನ್ ನೀಡಿರುವ ಹಣ ಕಂದಾಯದ ಹಣವಾಗಿರುತ್ತದೆ. ಆದರೆ ಕಂದಾಯದ ರಶೀದಿ ಕೊಡುವ ಮೊದಲೇ ಟ್ರ್ಯಾಪ್ ಮಾಡಿರುವುದರಿಂದ ನನಗೆ ರೂ. 3,000/-

ಹಣದ ಕಂದಾಯದ ರಶೀದಿಯನ್ನು ಕೊಡಲು ಸಾಧ್ಯವಾಗಲಿಲ್ಲ ಮತ್ತು ನಾನು ಯಾವುದೇ ಹಣವನ್ನು ಲಂಚವಾಗಿ ಪಡೆದಿರುವುದಿಲ್ಲ, ದೂರುದಾರರು ನನ್ನ ಮೇಲೆ ದ್ವೇಷದಿಂದ ದೂರನ್ನು ನೀಡಿರುತ್ತಾರೆ" ಎಂದು ಬರೆದುಕೊಟ್ಟಿರುತ್ತಾರೆ. ಸದರಿ ಹಾಳೆಗೆ ಪಂಚರುಗಳ ಸಹಿ ಪಡೆದು, ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದಿರುತ್ತಾರೆ. ಸದರಿ ಸಮಜಾಯಿಷಿ ಬಗ್ಗೆ ದೂರುದಾರರಿಗೆ ಕೇಳಲಾಗಿ ದೂರುದಾರರು ಸದರಿ ಸಮಜಾಯಿಷಿಯನ್ನ ಒಪ್ಪಿರುವುದಿಲ್ಲ, ನಂತರ ತನಿಖಾಧಿಕಾರಿಗಳು ದೂರುದಾರರಿಂದ ಇಲಾಖಾ ವಾಯ್ಸ್ ರೆಕಾರ್ಡರ್‌ನ್ನು ಹಾಜರುಪಡಿಸಿಕೊಂಡಿದ್ದನ್ನು ಕಂಪ್ಯೂಟರ್ ಮುಖಾಂತರ ಒಂದು ಸಿ.ಡಿ.ಗೆ ಸಿಬ್ಬಂದಿಯಿಂದ ವರ್ಗಾಯಿಸಿ ಸದರಿ ಸಿ.ಡಿ.ಯನ್ನು ಸೀಲ್ ಮಾಡಿ ವಶಕ್ಕೆ ಪಡೆದಿರುತ್ತಾರೆ.

16. ತನಿಖಾಧಿಕಾರಿಗಳು ಪಂಚರ ಸಮಕ್ಷಮ ಎದುರುದಾರರ ಅಂಗ ಶೋಧನೆ ಮಾಡಲಾಗಿ ಎದುರುದಾರರ ಬಳಿ ಒಂದು ಸ್ಯಾಮಸಂಗ್ ಕಂಪನಿಯ ಮೊಬೈಲ್ ಇದ್ದು, ಅದರಲ್ಲಿ ಎರಡು ಸಿಮ್ ಹಾಕುವ ಸೌಲಭ್ಯ ಇದ್ದು, ಅದರಲ್ಲಿ ಜೀಯೋ ಕಂಪನಿಯ 8310531499 ನಂಬರಿನ ಸಿಮ್ ಹಾಗೂ ಏರಟೇಲ್ ಕಂಪನಿಯ 7411172253 ನಂಬರಿನ ಸಿಮ್ ಇರುತ್ತದೆ. ಹಾಗೂ ರೂ 26,540/- ಹಣ ದೊರೆತಿರುತ್ತದೆ. ಮೊಬೈಲ್‌ನ್ನು ಎದುರುದಾರರ ವಶಕ್ಕೆ ಬಿಟ್ಟುಕೊಟ್ಟಿದ್ದು, ನಗದು ಹಣ ರೂ. 26540/- ರ ಬಗ್ಗೆ ಕೇಳಲಾಗಿ ಎದುರುದಾರರು ಅವರ ವೇತನದ ಹಣವಾಗಿದ್ದು, ತಾನು ಈಗ್ಗೆ 2-3 ತಿಂಗಳ ಬಸನಹಳ್ಳಿ ಗ್ರಾಮದ ಗುತ್ತಿಗೆದಾರರಾದ ರವಿಕುಮಾರ ಅವರ ಬಳಿ ರೂ.30,000/- ಗಳ ಸಾಲವನ್ನು ಪಡೆದುಕೊಂಡಿದ್ದು, ಅವರಿಗೆ ವಾಪಸ್ ಕೊಡುವ ಸಲುವಾಗಿ ಈಗ್ಗೆ ಒಂದು ವಾರದ ಹಿಂದೆ ಎಸ್.ಬಿ.ಐ ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ತನ್ನ ಜೇಬಿನಲ್ಲಿ ಇಟ್ಟುಕೊಂಡಿದ್ದು, ಸದರಿ ಮೊತ್ತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳಿಗೆ

ಎದುರುದಾರರ ಹೇಳಿಕೆಯು ಅನುಮಾನಾಸ್ಪದವಾಗಿದ್ದರಿಂದ, ಸದರಿ ಮೊತ್ತವನ್ನು ಅಮಾನತ್ತು ಪಡಿಸಿಕೊಂಡು ಸೀಲ್ ಮಾಡಿ ತಮ್ಮ ವಶದಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಬಳಿ ಇದ್ದ, ಬ್ಯಾಗ್‌ನ್ನು ಪರಿಶೀಲನೆ ಮಾಡಿದ್ದು, ಅದಲ್ಲಿ ಕರವಸೂಲಿ ಪುಸ್ತಕ ದೊರೆತಿದ್ದು, ನಮೂನೆ ನಂ 1ಎ (ರೂಲ್-8), ಕರ ವಸೂಲಿ ರಶೀದಿ ಎಂದು ಇದ್ದು, ಕ್ರಮ ಸಂಖ್ಯೆ: 58901 ರಿಂದ 59000 ವರೆಗೆ ದ್ವಿಪ್ರತಿಯಲ್ಲಿ ಇರುತ್ತದೆ. ಅದರಲ್ಲಿ ಕ್ರಮ ಸಂಖ್ಯೆ:58948 ರ ವರೆಗೆ ರಶೀದಿಗಳನ್ನು ಬರೆದಿದ್ದು, ಉಳಿದವುಗಳು ಖಾಲಿ ಇರುತ್ತದೆ. ಸದರಿ ಕರ ವಸೂಲಿ ಪುಸ್ತಕಕ್ಕೆ ಕ್ರಮ ಸಂಖ್ಯೆ:58916 ಮತ್ತು 58917 ರ ಖಾಲಿ ಹಾಳೆಗಳಿಗೆ ತನಿಖಾಧಿಕಾರಿಗಳು ಪಂಚರ ಸಹಿಗಳನ್ನು ಮಾಡಿಸಿ ಅದನ್ನು ಝುರಾಕ್ಸ್ ಮಾಡಿಸಿ, ಝುರಾಕ್ಸ್ ಪ್ರತಿಯನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಹಾಗೂ ಬ್ಯಾಗ್‌ನಲ್ಲಿ ಮತ್ತೊಂದು ಫೈಲ್ ದೊರೆತ್ತಿದ್ದು, ಅದು ಗಂಗನಕೋಟೆ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ದಾಖಲಾತಿಗಳಾಗಿರುತ್ತವೆ. ನಂತರ ಸದರಿ ಸ್ಥಳಕ್ಕೆ ಗಂಗನಕೋಟೆ ಪಿ.ಡಿ.ಓ ಸತೀಶಕುಮಾರ ರವರು ತನಿಖಾಧಿಕಾರಿಗಳ ಸೂಚನೆಯಂತೆ ಬಂದಿದ್ದು, ಸದರಿಯವರಿಗೆ ತನಿಖಾಧಿಕಾರಿಗಳು ಪ್ರಕರಣದ ಮಾಹಿತಿ ನೀಡಿ ಎದುರುದಾರರನ್ನು ಟ್ರ್ಯಾಪ್ ಮಾಡಿರುವುದಾಗಿ ತಿಳಿಸಿ, ಬ್ಯಾಗ್‌ನಲ್ಲಿ ದೊರೆತ ಎಲ್ಲಾ ದಾಖಲಾತಿಗಳನ್ನು ಮತ್ತು ಕರ ವಸೂಲಿ ಪುಸ್ತಕವನ್ನು ಪಿ.ಡಿ.ಓ ಸತೀಶಕುಮಾರ ಇವರ ವಶಕ್ಕೆ ನೀಡಿರುತ್ತಾರೆ.

17. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಗಂಗನಕೋಟೆ ಗ್ರಾಮ ಪಂಚಾಯತಿ ಪಿ.ಡಿ.ಓ ರವರು ನಮೂನೆ-12 ಪುಸ್ತಕವನ್ನು ಹಾಜರುಪಡಿಸಿದ್ದು, ಅದನ್ನು ನೋಡಲಾಗಿ ಖಾತೆ ನಂ:405, ಆಸ್ತಿ ನಂ:349 ರಲ್ಲಿ ಮಲ್ಲಮ್ಮ ಕೋಂ ಷಣ್ಮುಖಪ್ಪ ಎಂದು ಇದ್ದು, ಸದರಿ ಹಾಳೆಗೆ ಪಂಚರುಗಳ ಸಹಿ ಪಡೆದು, ತನಿಖಾಧಿಕಾರಿ ಸಹಿ ಮಾಡಿ ಅದನ್ನು

ಝೆರಾಕ್ಸ್ ಮಾಡಿಸಿ, ಝೆರಾಕ್ಸ್ ಪ್ರತಿಗಳಿಗೆ ಪಿ.ಡಿ.ಓ ರವರಿಂದ ದೃಢೀಕರಿಸಿ ಮುಂದಿನ ತನಿಖೆಗಾಗಿ ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಪಿ.ಡಿ.ಓ ರವರು ಸಭೆಯ ನಡಾವಳಿಯ ಠರಾವು ಪುಸ್ತಕವನ್ನು ಹಾಜರಪಡಿಸಿದ್ದು, ಅದನ್ನು ನೋಡಲಾಗಿ ಮೊದಲನೆ ಪುಟದಲ್ಲಿ ಸಾಮಾನ್ಯ ನಡಾವಳಿ ಪುಸ್ತಕ ಸನ್ 2017-18 ರಿಂದ ಪ್ರಾರಂಭಿಸಲಾಗಿದೆ ಎಂದು ಇದ್ದು, ಸದರಿ ಪುಸ್ತಕದಲ್ಲಿ ದಿನಾಂಕ:29/07/2019 ರಂದು ಸೋಮವಾರ ಬೆಳಿಗ್ಗೆ 11-00 ಘಂಟೆಗೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಜಯಮ್ಮ ಇವರ ಅಧ್ಯಕ್ಷತೆಯಲ್ಲಿ, ನಡೆದ ಸಾಮಾನ್ಯ ಸಭೆಯ ನಡಾವಳಿ ಎಂದು ಇರುತ್ತದೆ. ಆ ದಿನದ ನಡಾವಳಿಯನ್ನು ಬರೆದಿದ್ದು, ಸದರಿ ನಡಾವಳಿಯ ಕೊನೆಯ ಹಾಳೆಯಲ್ಲಿ ಪಂಚರುಗಳ ಸಹಿ ಪಡೆದು, ತನಿಖಾಧಿಕಾರಿಗಳು ಸಹಿ ಮಾಡಿ ಅದನ್ನು ಝೆರಾಕ್ಸ್ ಮಾಡಿಸಿ ಝೆರಾಕ್ಸ್ ಪ್ರತಿಗಳಿಗೆ ಪಿ.ಡಿ.ಓ ರವರಿಂದ ದೃಢೀಕರಿಸಿ ಮುಂದಿನ ತನಿಖೆಗಾಗಿ ತಮ್ಮ ವಶಕ್ಕೆ ಪಡೆದುಕೊಂಡು ಹಾಗೂ ಮೂಲ ದಾಖಲಾತಿಗಳನ್ನು ಪಿ.ಡಿ.ಓ ರವರ ವಶಕ್ಕೆ ತನಿಖಾಧಿಕಾರಿಗಳು ವಾಪಸ್ ನೀಡಿರುತ್ತಾರೆ.

18. ನಂತರ ತನಿಖಾಧಿಕಾರಿಗಳು ಎದುರುದಾರರ ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಸಿ.ಡಿ. ಮಾಡಿಕೊಂಡಿದ್ದರಲ್ಲಿನ ಆಯ್ದ ಭಾಗಗಳನ್ನು ಲೇಖಿ ಮಾಡಿಕೊಂಡಿದ್ದನ್ನು ಎದುರುದಾರರಿಂದ ಸದರಿ ಲೇಖಿ ಸಂಭಾಷಣೆಯನ್ನು ಮೂರು ಬಾರಿ ಓದಿಸಿ ಅದನ್ನು ಠಾಣೆಯ ಸೋನಿ ಕಂಪನಿಯ ಧ್ವನಿ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಅದನ್ನು ಮತ್ತೊಮ್ಮೆ ಪಂಚರಿಗೆ ಕೇಳಿಸಿ ಕಂಪ್ಯೂಟರ್ ಮುಖಾಂತರ ಒಂದು ಖಾಲಿ ಸಿ.ಡಿ. ಗೆ ವರ್ಗಾಯಿಸಿ ಸದರಿ ಸಿ.ಡಿ ಯ ಮೇಲೆ **"ಶ್ರೀ ಸಾಗರ್, ಬಿಲ್‌ಕಲೆಕ್ಟರ್, ಗಂಗನಕೋಟೆ ಗ್ರಾಮ ಪಂಚಾಯತಿ, ನ್ಯಾಮತಿ ತಾಲ್ಲೂಕ, ದಾವಣಗೆರೆ ಜಿಲ್ಲೆ ರವರ ಒಪ್ಪಿತ ಮಾದರಿ ಧ್ವನಿ"** ಎಂದು ಬರೆದು ಸದರಿ

ಸಿ.ಡಿ ಯನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಅದೇ ರೀತಿ ದೂರುದಾರರು ಮಾತನಾಡಿದ ಲೇಖಿ ಸಂಭಾಷಣೆಯನ್ನು ಮೂರು ಬಾರಿ ಓದಿಸಿ ಅದನ್ನು ಠಾಣೆಯ ಸೋನಿ ಕಂಪನಿಯ ಧ್ವನಿ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಅದನ್ನು ಮತ್ತೊಮ್ಮೆ ಪಂಚರಿಗೆ ಕೇಳಿಸಿ ಕಂಪ್ಯೂಟರ್ ಮುಖಾಂತರ ಒಂದು ಖಾಲಿ ಸಿ.ಡಿ.ಗೆ ವರ್ಗಾಯಿಸಿ ಸದರಿ ಸಿ.ಡಿ.ಯ ಮೇಲೆ **"ಶ್ರೀ ಸಚಿನ್ ಬಿನ್ ಷಣ್ಮುಖಪ್ಪ, 21 ವರ್ಷ, ದಾನಿಹಳ್ಳಿ ಗ್ರಾಮ, ನ್ಯಾಮತಿ ತಾಲೂಕ, ದಾವಣಗೆರೆ ಜಿಲ್ಲೆ ರವರ ಒಪ್ಪಿತ ಮಾದರಿ ಧ್ವನಿ"** ಎಂದು ಬರೆದು ಸದರಿ ಸಿ.ಡಿ ಯನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ.

19. ನಂತರ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ದೂರುದಾರರ ಮತ್ತು ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ಸಿ.ಡಿ. ಮಾಡಿಕೊಂಡಿದ್ದನ್ನು ಪಿ.ಡಿ.ಓ ಸತೀಶ ಕುಮಾರರವರಿಗೆ ಕೇಳಿಸಿದ್ದು, ಅದರಲ್ಲಿಯ ಒಂದು ಧ್ವನಿಯನ್ನು ಪಿ.ಡಿ.ಓ ರವರು ಎದುರುದಾರರ ಧ್ವನಿ ಎಂದು ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿ, ದಸ್ತಗಿರಿ ಮಾಹಿತಿಯನ್ನು ಪಿ.ಡಿ.ಓ ಸತೀಶ ಕುಮಾರ ರವರಿಗೆ ನೀಡಿರುತ್ತಾರೆ. ಘಟನಾ ಸ್ಥಳದ ನಕಾಶೆ ತಯಾರಿಸಲು ಸಹಾಯಕ ಅಭಿಯಂತರರಾದ ಶ್ರೀ ಭೀಮಾ ನಾಯಕ್‌ರವರಿಗೆ ಮಾಹಿತಿ ನೀಡಿರುತ್ತಾರೆ.

20. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಸಿಬ್ಬಂದಿಯಿಂದ ಹಂತ ಹಂತವಾಗಿ ಫೋಟೋ ತೆಗೆಸಿ, ವಿಡಿಯೋ ಚಿತ್ರೀಕರಣ ಸಹ ಮಾಡಿಸಿ, ಸದರಿ ಫೋಟೋ ಮತ್ತು ವಿಡಿಯೋಗಳನ್ನು ಡಿ.ವಿ.ಡಿಯಲ್ಲಿ ವರ್ಗಾಯಿಸಿಕೊಂಡು ಡಿ.ವಿ.ಡಿ.ಯಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ತನಿಖಾಧಿಕಾರಿಗಳು ಸಹಾಯಕ ಕಾರ್ಯಪಾಲಕ ಇಂಜನಿಯರ್‌ವರ ಕಚೇರಿ, ಪಂಚಾಯತ್‌ರಾಜ್ ಇಂಜನಿಯರಿಂಗ್ ಉಪ-ವಿಭಾಗ, ಹೊನ್ನಾಳಿ ಕಚೇರಿಯಲ್ಲಿ ಬೆಳಿಗ್ಗೆ 10-15

ಘಂಟೆಯಿಂದ ಮಧ್ಯಾಹ್ನ 2-30 ಘಂಟೆಯ ವರೆಗೆ ಪಂಚರು ಹೇಳಿದಂತೆ ಸಿಬ್ಬಂದಿಗೆ ಉಕ್ತಲೇಖನ ನೀಡಿ ಲ್ಯಾಪ್‌ಟಾಪ್‌ನಲ್ಲಿ ಗಣಕೀಕರಿಸಿ ಠಾಣೆಯಿಂದ ತಂದಿದ್ದ ಪ್ರಿಂಟರ್‌ನಿಂದ ಪ್ರಿಂಟ್ ತೆಗೆಯಿಸಿರುತ್ತಾರೆ.

21. ಸಿ.ಡಿ.ಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ತಿಳಿಯಬೇಕಾಗಿರುತ್ತದೆ. ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆಯಿಸಿದ ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಹಾಗೂ ಎದುರುದಾರರ ಶರ್ಟಿನ ಜೇಬನ್ನು ತೊಳೆಯಿಸಿದ ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ, ಫಿನಾಫ್ತಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಅಭಿಯೋಜನೆಗೊಳಪಡಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

22. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ಸಲ್ಲಿಸಲು ದಿನಾಂಕ: 17/10/2022 ರಿಂದ ಸಾಕಷ್ಟು ಕಾಲಾವಕಾಶ ನೀಡಿದರೂ ಇದುವರೆಗೂ ಸಲ್ಲಿಸಿರುವುದಿಲ್ಲ. ಸದರಿ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಸಲ್ಲಿಸದೆ ಇರುವುದೂ ಕೂಡ ಕರ್ತವ್ಯ ಲೋಪವಾಗಿರುತ್ತದೆ. ಕಾರಣ ಎದುರುದಾರರ ಮೇಲೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

23. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

24. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

25. ಅದಲ್ಲದೆ ಎದುರುದಾರರಾದ **ಶ್ರೀ ಎಸ್. ಸಾಗರ ಬಿನ್ ಲೇಟ್ ಶೇಖರಪ್ಪ, ಬಿಲ್ ಕಲೆಕ್ಟರ್, ಗಂಗನಕೋಟೆ ಗ್ರಾಮ ಪಂಚಾಯತ್, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ** (ನಿವೃತ್ತಿ ದಿನಾಂಕ: 30/09/2047) ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

26. ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ

ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/6/23

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.